

ಬೆಟ್ಟದ ಮೇಲಿನ ಗುಹಾಂತರ ಸೋಮೇಶ್ವರ ದೇವಾಲಯದ ಬಳಿ ಇರುವ ಪುರಾತನ ಬಿಲ್ವಪತ್ರೆ ಮರ



# ಗಟ್ಟಿಪುರಕ್ಕೆ ಬಿಲ್ವವನದ ತೋರಣ

**ಮಾಗಡಿ ತಾಲ್ಲೂಕಿನ ಗಟ್ಟಿಪುರ ಗ್ರಾಮದಲ್ಲಿ ಸಾವಿರಾರು ಬಿಲ್ವಪತ್ರೆ ಮರಗಳ ವನವಿದೆ. ಭಕ್ತಿ ಹಾಗೂ ಪರಿಸರ ಪ್ರೇಮ ತಳುಕು ಹಾಕಿಕೊಂಡಿರುವ ವಿಶೇಷ ಉದಾಹರಣೆಯಿದು. ಮಾಗಡಿ ತಾಲ್ಲೂಕಿನ ಪರಿಸರ ಪ್ರಜ್ಞೆ ಹಾಗೂ ಚಾರಿತ್ರಿಕ ಹೊಳಪು ಎರಡನ್ನೂ ಗಟ್ಟಿಪುರ ಒಳಗೊಂಡಿದೆ.**

**■ ದೊಡ್ಡಬಾಣಗೆರೆ ಮಾರಣ್ಣ**

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ‘ಅರೆಮಲೆನಾಡು’ ಎಂದು ಪ್ರಸಿದ್ಧ. ಬೆಟ್ಟಗುಡ್ಡಗಳ ಜೊತೆಗೆ ಸಣ್ಣಪುಟ್ಟ ಕಾಡಿನಂಥ ಹಸಿರುರಚನೆಗಳು ತಾಲ್ಲೂಕಿನಲ್ಲಿವೆ. ತಾಲ್ಲೂಕಿನ ಕುದೂರು ಹೋಬಳಿಯ ಹುಲಿಕಲ್ ಗ್ರಾಮದ ತಿಮ್ಮಕ್ಕನಿಂದಾಗಿ ‘ಜಾಗತಿಕ ಪರಿಸರ ನಕಾಶೆ’ಯಲ್ಲೂ ಮಾಗಡಿ ಜನಪ್ರಿಯ. ರಸ್ತೆಯುದ್ದಕ್ಕೂ ಆಲದ ಕೊಂಬೆಗಳನ್ನು ನೆಟ್ಟು ನೀರೆರೆದು ಪರಿಸರ ಸಂರಕ್ಷಣೆ ಮಾಡಿದ ತಿಮ್ಮಕ್ಕನ ಹೆಸರಿನ ಜೊತೆಗೆ ‘ಸಾಲುಮರದ’ ವಿಶೇಷಣ ತಳುಕು ಹಾಕಿಕೊಂಡಿತು. ಈ ಸಾಲುಮರ ಎನ್ನುವ ವಿಶೇಷಣ ಮಾಗಡಿ ತಾಲ್ಲೂಕಿನ ಪರಿಸರ ಪ್ರಭಾವಳಿಗೆ ಹೊಂದುವಂತಹದ್ದೂ ಹೌದು. ಅದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಗಟ್ಟಿಪುರ ಗ್ರಾಮಕ್ಕೆ ಬರಬೇಕು. ಪರಿಸರ ಪ್ರಜ್ಞೆಯ ಜೊತೆಗೆ ಚಾರಿತ್ರಿಕ ಮಹತ್ವವನ್ನೂ ಹೊಂದಿರುವ ಅಪರೂಪದ ಊರಿದು.

ಗಟ್ಟಿಪುರ ಗ್ರಾಮದಲ್ಲಿ ಸಾಲುಸಾಲಾಗಿ ಇರುವುದು ಆಲದ ಮರಗಳಲ್ಲ; ಬಿಲ್ವಪತ್ರೆ ಮರಗಳು. ಸಹಸ್ರಾರು ಬಿಲ್ವಪತ್ರೆ ಮರಗಳಿಂದ ಕಂಗೊಳಿಸುವ ‘ಬಿಲ್ವಪತ್ರೆ ವನ’ ಗಟ್ಟಿಪುರದ ವಿಶೇಷ. ಪ್ರಕೃತಿದತ್ತವಾಗಿ ಬೆಳೆದಿರುವ ಬಿಲ್ವಪತ್ರೆ ಮರಗಳು ಇಂದು ಬಾನೆತ್ತರಕ್ಕೆ ಬೆಳೆದು ನಿಂತಿವೆ.

ಬಿಲ್ವಪತ್ರೆಗೂ ಭಕ್ತಿಗೂ ವಿಶೇಷ ನಂಟಷ್ಟೆ. ಶಿವನನ್ನು ಬಿಲ್ವಪ್ರಿಯ ಎನ್ನುವರು. ಅದಕ್ಕೆ ತಕ್ಕಂತೆ ಎರಡು ಎಕರೆ ಪ್ರದೇಶದಲ್ಲಿ ವಿಸ್ತರಿಸಿರುವ ಬಿಲ್ವಪತ್ರೆ ವನದ ನಡುವೆ ಮಹದೇಶ್ವರ ಸ್ವಾಮಿ ಮಂದಿರವಿದೆ. ಬಸವಣ್ಣ, ಅಕ್ಕಮಹಾದೇವಿ ದೇವಾಲಯಗಳೂ ಇವೆ. ಪರಿಸರಪ್ರಿಯರು ಬಿಲ್ವವನದಲ್ಲಿ ಅಡ್ಡಾಡಿ ಸಂತಸಪಟ್ಟರೆ, ಆಸ್ತಿಕರಿಗೆ

